ಇ-ಮೇಲ್ : drsyndicateku@gmail.com ವೆಬ್‌ಸೈಟ್:www.kuvempu.ac.in

ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನ ಸಹ್ಯಾದ್ರಿ- 577 451

ಸಂಖ್ಯೆ: ಕುವಿ:ಯುಏಟಿ-2: 183 2025-26 ದಿನಾಂಕ:25-07-2025

# ಸುತ್ತೋಲೆ

ವಿಷಯ : 2025-26ನೇ ಶೈಕ್ಷಣಿಕ ಸಾಲಿನ ಎಸ್.ಇ.ಪಿ. ಪಠ್ಯಕ್ರಮದ ಸೈದ್ಧಾಂತಿಕ ಬೋಧನಾ ಅವಧಿ / ಕ್ರೆಡಿಟ್ಸ್ / ಎಲೆಕ್ಟೀವ್ ಪತ್ರಿಕೆಗಳ ಕುರಿತು.

ಉಲ್ಲೇಖ ; 1) ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಡೀನರು ಹಾಗೂ ವಿಜ್ಞಾನ ನಿಕಾಯದ ಬಿ.ಓ.ಎಸ್. ಅಧ್ಯಯನ ಮಂಡಳಿ ನಿರ್ಣಯ ಸಭೆ ದಿನಾಂಕ:18-07-2025

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:23-07-2025

---

2025-26ನೇ ಶೈಕ್ಷಣಿಕ ಸಾಲಿನ ಎಸ್.ಇ.ಪಿ. ಪಠ್ಯಕ್ರಮದ ಸೈದ್ಧಾಂತಿಕ ಬೋಧನಾ ಅವಧಿ / ಕ್ರೆಡಿಟ್ಸ್ / ಎಲೆಕ್ಟೀವ್ ಪತ್ರಿಕೆಗಳ ಕುರಿತು ದಿನಾಂಕ:18-07-2025 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಎಲ್ಲಾ ನಿಕಾಯಗಳ ಡೀನರು ಮತ್ತು ವಿಜ್ಞಾನ ನಿಕಾಯಗಳ ಅಧ್ಯಯನ ಮಂಡಳಿ ಅಧ್ಯಕ್ಷರುಗಳ ಸಭೆಯಲ್ಲಿ ನಿರ್ಣಯವಾದಂತೆ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

1) ಯು.ಜಿ.ಸಿ. ನಿಯಮಾವಳಿ ಪ್ರಕಾರ 01 ಗಂಟೆಗೆ 01 ಕ್ರೆಡಿಟ್‌ನ್ನು ನಿಗದಿಪಡಿಸಬೇಕಾಗಿದ್ದು, ಅದನ್ನೇ ಒಪ್ಪಿಕೊಳ್ಳಲಾಯಿತು. ಮುಂದುವರೆದು ಈ ಕುರಿತು ಎಸ್.ಇ.ಪಿ. ಮಾರ್ಗಸೂಚಿಯಂತೆ ಗರಿಷ್ಠ ಕ್ರೆಡಿಟ್ 150 ಮಿತಿಗೆ ಒಳಪಟ್ಟಂತೆ ಇರುವುದನ್ನು ಪರಿಗಣಿಸಿ ಕ್ರೆಡಿಟ್ ಅಂಕ ಹಾಗೂ ಬೋದನಾ ಅವಧಿಗಳನ್ನು ನಿಗದಿಪಡಿಸಲು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆಗೆ ಪತ್ರ ಬರೆದು ಮಾರ್ಗದರ್ಶನ ಪಡೆಯಬಹುದೆಂದು ನಿರ್ಣಯಿಸಲಾಯಿತು.

2) 3 ಮತ್ತು 4ನೇ ಸೆಮಿಸ್ಟರ್ ಪ್ರದವಿ ತರಗತಿಗಳಲ್ಲಿ ಎಲೆಕ್ಟಿವ್ ಪತ್ರಿಕೆಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ 01 ವಿಷಯಕ್ಕೆ 02 ಎಲೆಕ್ಟಿವ್ ಪತ್ರಿಕೆಯಂತೆ ಒಟ್ಟು ಮೂರು ವಿಷಯಗಳಿಗೆ ಸಂಬಂಧಿಸಿದಂತೆ 06 ಎಲೆಕ್ಟಿವ್ ಪತ್ರಿಕೆಗಳನ್ನು ನಿಗದಿಪಡಿಸಿ ಅವುಗಳಲ್ಲಿ ಯಾವುದಾದರೂ 01 ಎಲೆಕ್ಟಿವ್ ಪತ್ರಿಕೆಯನ್ನು ಮಾತ್ರ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವ ಕುರಿತು ಸಭೆಯು ನಿರ್ಣಯಿಸಿತು ಹಾಗೂ ಇದನ್ನು ಸುತ್ತೋಲೆ ಮುಖಾಂತರ ಕಾಲೇಜುಗಳಿಗೆ ಪರಿಚಲಿಸಲು ನಿರ್ಣಯಿಸಲಾಯಿತು. ಒಂದು ಎಲೆಕ್ಟಿವ್ ಬ್ಯಾಚ್‌ನಲ್ಲಿ ಕನಿಷ್ಠ 20 ಮತ್ತು ಗರಿಷ್ಠ 40 ವಿದ್ಯಾರ್ಥಿಗಳಿಗೆ ಅವಕಾಶ ನೀಡಲು ಸಮ್ಮತಿಸಲಾಯಿತು.

## Additional Information

**Case -1**

**(One Elective + One Compulsory Course-Practical Knowledge/Skill)**

| SEM | M-1 | M-2 | M-3 | Elective Optional | Languages | Compulsory Course | Total Credits |
|---|---|---|---|---|---|---|---|
| I | 5 | 5 | 5 | - | 6 | 2 | 23 |
| II | 5 | 5 | 5 | - | 6 | 2 | 23 |
| III | 5 | 5 | 5 | 2 * | 6 | - | 23 |
| IV | 5 | 5 | 5 | 2 * | 6 | 2 | 25 |

*** Student Selects 1, among the 6 Electives**

ಪು.ತಿ.ನೋ.

3) 5 ಮತ್ತು 6ನೇ ಸೆಮಿಸ್ಟರ್ ಪದವಿ ತರಗತಿಗಳಿಗೆ ಕೋರ್ಸ್‌ಗಳ ಸೇರ್ಪಡೆ ಕ್ರೆಡಿಟ್ಸ್ ಹಾಗೂ ಬೋಧನಾ ಅವಧಿ ನಿಗದಿಪಡಿಸುವ ಬಗ್ಗೆ ತದ ನಂತರದಲ್ಲಿ ನಿರ್ಣಯಿಸಲು ಸಭೆಯು ತೀರ್ಮಾನಿಸಿತು.

10/2/25

ಕುಲಸಚಿವರು
ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ

ಗೆ,

1) ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ಮಂಡಳಿಯ ಅಧ್ಯಕ್ಷರುಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ/ ಶಿವಮೊಗ್ಗ/ ಕಡೂರು/ ಚಿಕ್ಕಮಗಳೂರು – ಸೂಕ್ತ ಕ್ರಮಕ್ಕಾಗಿ.
2) ಉಪಕುಲಸಚಿವರು (ಹೆ.ಪ್ರ), ಶೈಕ್ಷಣಿಕ ವಿಭಾಗ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಕಾಲೇಜುಗಳಿಗೆ ಪರಿಚಲಿಸಲು ಸೂಕ್ತ ಕ್ರಮಕ್ಕಾಗಿ

<u>ಪ್ರತಿಗಳು:</u>

1. ಆಪ್ತಕಾರ್ಯಾಲಯ ಕುಲಪತಿಗಳು: ಕುಲಸಚಿವರು: ಕುಲಸಚಿವರು (ಮೌಲ್ಯಮಾಪನ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ– ಮಾಹಿತಿಗಾಗಿ.
2. ಕಛೇರಿ ಪ್ರತಿ.